# ಸೇಬಿನ ಮೇಲೊಂದು ಶೋಕಗೀತೆ

ನಾವು ದುಃಖಿಸುವೆವು
ಸೇಬೊಂದು ಸೌತೆಕಾಯಿ ಎಂಬಂತೆ
ಪುನಃ ಪ್ರಾರ್ಥಿಸುವೆವು
ಅದು ಇನ್ನೂ ಕೆಂಪೇರದಂತೆ

ಅಲ್ಲೊಂದು ತಟ್ಟೆ ಮತ್ತೆ ಮುಳ್ಳಿನ ಚಮಚೆ
ನಾವು ಆಲೂಗಡ್ಡೆ ಸುಲಿಯುತ್ತೇವೆ

'ಎಂಜಾಯ್ ಮಾಡಿ!
ನನ್ನ ಚುರುಕಾದ ಬೆರಳುಗಳು
ಮತ್ತೆ ನಿಮಾಗಾಗಿ ಕಾದಿಟ್ಟ ಪೀಚ್ ಹಣ್ಣುಗಳು'

ನಾವು ಅತಿಥಿಗಳನ್ನು ಹೀಗೆಯೇ ಸ್ವಾಗತಿಸುತ್ತೇವೆ

ಸಾವಿನ ನಿರೀಕ್ಷೆಯಲ್ಲಿದ್ದೇವೆ ನಾವು
ಆದರೂ ಸೇಬು ಸಾಯುತ್ತಿಲ್ಲ
ನಮಗೋ ಕಾದು ಕಾದು ಬೇಸತ್ತು ಆಕಳಿಕೆ
ಆದರೂ ಸೇಬು ಸಾಯುತ್ತಿಲ್ಲ
ಉರುಳಾಡಿಸಿ ಹೊಡೆಯುತ್ತೇವೆ ಸೇಬಿನ ಕಪಾಳಕ್ಕೆ
ಸೇಬಿನ ಮೈ ಗೀರುತ್ತೇವೆ ಚೂರುತ್ತೇವೆ
ಒಳಗಿನ ಕರಿಬೀಜಗಳ ಹೊರ ತೆಗೆಯುತ್ತೇವೆ

'ಇದು ಕೆಮ್ಮಿಗೆ ಭಾಳ ಒಳ್ಳೇದು!'

'ನಿನ್ನದೇ ವಿಷಬೀಜದೊಳಗೆ ನೀನು ಸಾಯುತ್ತಿರುವೆ, ಸೇಬೇ
ನಿನಗೆ ನೋವಾಗುತ್ತಿಲ್ಲ
ನೀನು ನರಳುತ್ತಿಲ್ಲ
ನಿನ್ನದು ಸುಖದ ಸಾವು ಸೇಬೇ
ನಿನ್ನ ಅಂತಿಮ ಸಂಸ್ಕಾರಕ್ಕೆ ಅಣಿಯಾಗು ಸೇಬೇ!'

ಈ ಮೃತ ಶರೀರವೆಂಬುದು ಖಂಡಿತ ಸೇಬಲ್ಲ
ಇದೊಂದು ಬೆಂಡು ಸೌತೆಕಾಯಿಯಾಗಿರಬಹುದು
ಅಥವಾ ಹಸಿರಾಗಿ, ಕೆಂಪಾಗಿ, ಹಳದಿ ಕಂದಾಗಿ ಮಾಗುವ ಪಿಯರ್

# ಎರಡು ಕಪ್ಪು ಗುಂಡಿಗಳು

ಖಿನ್ನತೆಯ ಆದಿಮೂಲ ನನ್ನೀ ಕಣ್ಣುಗಳು

ನನ್ನೀ ಕಣ್ಣ ಕುಳಿಗಳಿಗೆ
ಸರಿಹೊಂದುವಂತೆ ಹೊಲಿದು
ಜೋಡಿಸಿರುವೆ
ಎರಡು ಕಪ್ಪು ಗುಂಡಿಗಳನ್ನು

ಮತ್ತೆ ನೀವು
ಪ್ರೀತಿಯಿಂದ ನನ್ನನ್ನು ಅದುಮುತ್ತೀರಿ
ಗೊತ್ತಿಲ್ಲದಂತೆ ಆವರಿಸಿಕೊಳ್ಳುತ್ತದೆ
ಈ ಪಾಳು ಮನೆಯಲ್ಲಿ ಎಲ್ಲೆಲ್ಲೂ ಕರಾಳತೆ...

